ಶ್ರೀ ಮಾಟಾಳ್ ನಾಗರಾಜ್ : ನನ್ನ ಹೆಸರಿನ ಮುಂದೆ ಇರುವ ಕಾಲದ ಪತ್ರಗಳನ್ನು ಮಂಡಿಸುತ್ತೇನೆ ಎಂದರೆ ನನಗೆ ಅರ್ಥವಾಗುತ್ತಿಲ್ಲ. ಯಾವ ಯಾವ ಕಾಗದ ಪತ್ರಗಳನ್ನು ಮಂಡಿಸಿದ್ದಾರೆ ಎಂದು ಹೇಳಬೇಕು.

ಶ್ರೀ ಸಿದ್ದರಾಮಯ್ಯ : ಇದು ಇವೊತ್ತು ನಡೆದು ಬಂದಂಥ ಪ್ರವೃತ್ತಿ ಅಲ್ಲ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವ ಸಚಿವರು ಸದನದಲ್ಲಿಲ್ಲ ಅವರ ಹೆಸರಿನ ಮುಂದೆ ಇರುವ ಕಾಗದ ಪತ್ರಗಳನ್ನು ಸಂಸದೀಯ ವ್ಯವಹಾರಗಳ ಸಚಿವರು ಮಂಡನೆ ಮಾಡಬಹುದು. ಆದರೆ ಸದನದಲ್ಲಿ ಇದ್ದವರ ಪರವಾಗಿ ಅವರು ಮಂಡನೆ ಮಾಡುವುದು ಸರಿಯಲ್ಲ.

ಶ್ರೀ ಎಂ.ಸಿ. ನಾಣಯ್ಯ : ಕಣ್ಣು ಸ್ವಲ್ಪ ಮಂಜಾಗಿತ್ತು. ಕಾಣಿಸಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಚಸ್ಮಾವನ್ನು ಕೈಯಲ್ಲಿ ಹಿಡಿದಿದ್ದೀರಿ, ಹಾಗೆಯೇ ನೋಡಿದರೆ ಹೇಗೆ ಕಾಣಿಸುತ್ತದೆ. ಕಣ್ಣಿಗೆ ಹಾಕಿಕೊಂಡರೆ ಕಾಣಿಸುತ್ತದೆ.

ಅಧ್ಯಕ್ಷರು : ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಇದನ್ನು ಸ್ವಲ್ಪ ಸಿರಿಯಸ್ ಆಗಿ ತೆಗೆದುಕೊಳ್ಳಬೇಕು. ಹಿಂದೆ ಕೂಡ ಇದೇ ರೀತಿ ನಡೆದಿರುವ ಪ್ರಿಸಿಡೆಂಟ್ ಇದೆ. ಅದೇನೆಂದರೆ ಯಾವ ಸಚಿವರು ಸಭೆಯಲ್ಲಿಲ್ಲ, ಅವರ ಪರವಾಗಿ ಬೇರೆ ಸಚಿವರು ಮಂಡಿಸಬಹುದು. ಆದರೆ ಇಲ್ಲಿ ಸಂಬಂಧಪಟ್ಟ ಸಚಿವರು ಅವರ ಜಾಗದಲ್ಲಿ ಕುಳಿತುಕೊಂಡಿದ್ದರೂ ನಮ್ಮ ಸಂಸದೀಯ ಸಚಿವರು ಅವರ ಪರವಾಗಿ ಮಂಡಿಸಿದರೆ ಅದರಿಂದ ಸಭೆಗೆ ಏನು ಗೌರವ ಬರುತ್ತದೆ.?

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿಯವರು ಕಳೆದ ಅಧಿವೇಶನದಲ್ಲಿ ನೀಡಿದ ವರದಿಯ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಪತಿಯವರಿಂದ ಸಂದರ್ಭಾನುಸಾರವಾಗಿ ಒಪ್ಪಿಗೆ ನೀಡಿದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯಪಾಲರಿಂದ ಅಥವಾ ರಾಷ್ಟ್ರಪತಿಯವರಿಂದ ಒಪ್ಪಿಗೆಯನ್ನು ಪಡೆಯತಕ್ಕ ವಿಧೇಯಕಗಳ ಪಟ್ಟಿ

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1	2	3	4
1.	ಕರ್ನಾಟಕ ಶಿಕ್ಷಣ ವಿಧೇಯಕ 1983	27-10-1993	ರಾಷ್ಟ್ರಪತಿಯವರು
2.	ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ 1994.	29-9-94	ರಾಜ್ಯಪಾಲರು
3.	ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ವಿಧೇಯಕ 1994	6-10-94	

4.	ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವಿಧೇಯಕ 1994	7-10-94	"
5.	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ವಿಧೇಯಕ 1992	8-11-94	
6.	ಕರ್ನಾಟಕ ಅಬ್ಕಾರಿ (ಮೂರನೇ ತಿದ್ದುಪಡಿ) ವಿಧೇಯಕ 1993.	21-2-95	ರಾಷ್ಟ್ರಪತಿಯವರು

ಅಧ್ಯಕ್ಷರು : ವರದಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಯಮ 68ರ ಕೆಳಗಡೆ ನಾನು ಎಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ.

ಶ್ರೀ ವಾಟಾಳ್ ನಾಗರಾಜ್ : ಯಾರ್ಯಾರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಹಾಗೂ ಯಾರ್ಯಾರು ನಿಲುವಳಿ ಸೂಚನೆಗೆ ಸಹಿ ಹಾಕಿದ್ದಾರೆ ಎಂಬುದನ್ನು ತಿಳಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ವಾಟಾಳ್ ನಾಗರಾಜ್, ಖಮರುಲ್ ಇಸ್ಲಾಂ ಅವರು, ಹಾಗೂ ಬೇರೆ ಬೇರೆ ಪ್ರತಿಪಕ್ಷಗಳ ಮುಖಂಡರು ಇವ್ಮೊತ್ತು ಅತ್ಯಂತ ಪ್ರಮುಖವಾದ ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇವೆ. ನಿಯಮಾವಳಿಗಳ ಪ್ರಕಾರ ಅದಕ್ಕೆ ಆದ್ಯತೆಯನ್ನು ಕೊಟ್ಟು ಪ್ರಿಲಿಮಿನರಿ ಸಬ್‌ಮಿಷನ್‌ಗೆ ದಯವಿಟ್ಟು ಅವಕಾಶ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಿಯಮ 68ರ ಕೆಳಗಡೆ ತಾವು ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ. ಆದರೆ ಮಾನ್ಯ ಸದಸ್ಯರಾದ ಶ್ರೀ ನಾಗೇಗೌಡರು ನಿಯಮ 27 ಮತ್ತು 191ರ ಅಡಿಯಲ್ಲಿ ಪ್ರಿವಿಲೇಜ್ ಪೋಷನ್ ಕೊಟ್ಟಾಗ ಅದಕ್ಕೆ ನಾವು ಮೊದಲು ಪ್ರಾಧಾನ್ಯತೆ ಕೊಡಬೇಕಾಗುತ್ತದೆ. ನಾನು ಕೌಲ್ ಅಂಡ್ ಪಕ್ಷ್‌ದರ್ ಪುಸ್ತಕವನ್ನು ಇಲ್ಲಿಯೇ ಇಟ್ಟುಕೊಂಡಿದ್ದೇನೆ. ಆದುದರಿಂದ ಮೊದಲು ಅದನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ನಂತರ ಶ್ರೀ ಯಡಿಯೂರಪ್ಪನವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದು, ನಿಯಮ 60ರ ಪ್ರಕಾರ ನಾವು ನಿಲುವಳಿ ಸೂಚನೆ ಕೊಟ್ಟಾಗ ಅದಕ್ಕೆ ಬೇಕಾದಂಥ ಸಂಖ್ಯೆಯಲ್ಲಿ ಸದಸ್ಯರು ಬೆಂಬಲವನ್ನು ಸೂಚಿಸಿದರೆ ಹಾಗೂ ಸರ್ಕಾರ ಒಪ್ಪಿದರೆ ಅಂತಹ ಸಂದರ್ಭದಲ್ಲಿ ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ನಿಲುವಳಿ ಸೂಚನೆಯನ್ನು ಕೈಗೆತ್ತಿಕೊಳ್ಳುವ ಅಧಿಕಾರ ತಮಗೆ ಇದೆ. ತಾವು ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈ ವಿಷಯ ತೆಗೆದುಕೊಳ್ಳುವುದಿಲ್ಲ ಎಂದು ಹೇಳಲಿಲ್ಲ. ನಾನು ಕಲ್ ಆಂಡ್ ಪ್ಷಕ್‌ದರ್ ಪುಸ್ತಕವನ್ನು ಆಧಾರವನ್ನಾಗಿ ಇಟ್ಟುಕೊಂಡಿದ್ದೇನೆ. ಅದರಂತೆ ನಿಲುವಳಿ ಸೂಚನೆಗಿಂತ ಪ್ರಿವಿಲೇಜ್ ಮೋಷನ್‌ಗೆ ಹೆಚ್ಚು ಪ್ರಾಧಾನ್ಯತೆ ಸಿಗುತ್ತದೆ. ಬೇಕಾದರೆ ಅದನ್ನು ಓದುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಏನು ಹೇಳಿದ್ದೀರಿ ಅದರಂತೆ ನಡೆದುಕೊಳ್ಳುತ್ತೇನೆ. ಅದು ಆದಾದ ಮೇಲೆ ತೆಗೆದುಕೊಳ್ಳುತ್ತೇನೆ ಎಂದರೆ....

ಅಧ್ಯಕ್ಷರು : ತೆಗೆದುಕೊಳ್ಳುತ್ತೇನೆಂದು ಹೇಳಲು ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಶಾಸಕರಾಗಿ ನಾವು ಏನು ಕೆಲಸ ಮಾಡಬೇಕಾಗಿದೆ. ನಮಗೆ ಏನು ಅಧಿಕಾರ ಇದೆ ಎಂಬ ಬಗ್ಗೆ ಗೊಂದಲ ಇದೆ.